

ಆದರೂ ಜೀವನ ಮೆಲ್ಲನೆ ಹೊರಳುತ್ತಿತ್ತು. ಕ್ರಮೇಣ ಅಜಯನ ಪ್ರೊಜೆಕ್ಟ್ ವರ್ಕ್‌ಗಳೆಲ್ಲ ನನ್ನ ತಲೆಗೇ ಬಂದವು. ಇದು ಒಂದು ರೀತಿಯಲ್ಲಿ ನನಗೆ ವರವಾಗಿ ಅಭ್ಯಾಸವೂ ಆಯಿತು. ಕಾಲೇಜಿಗೇ ಪ್ರಥಮ ರ್‍ಯಾಂಕ್ ಬಂದೆ. ನನ್ನ ಪರಿಸ್ಥಿತಿಯ ಅರಿವಿದ್ದ ಸ್ನೇಹಿತರು, ಲೆಕ್ಚರರ್‌ಗಳು ನನಗೆ ಸಹಾಯ ಮಾಡಿ ಸಂಜೆ ಕಾಲೇಜಲ್ಲಿ ಕೆಲಸ ಕೊಡಿಸಿದರು. ಸಂಜೆ ಪಾಠ ಮಾಡುತ್ತ ಬೆಳಿಗ್ಗೆ ಬಿ.ಇ. ಗೆ ಸೇರಿದೆ. "ಕಾಕು, ಓಡ್ಯಾಡಲಿಕ್ಕೆ ಧೂರಾಗಿ ತ್ರಾಸಾಗ್ತದ. ಓದಲಿಕ್ಕೆ ಟೈಮ್ ಉಳಿಯೂದೇ ಇಲ್ಲ. ನಾ ಅಲ್ಲೇ ಸಮೀಪದಾಗ ರೂಮು ಮಾಡತೇನಿ" ಎಂದೆ. 'ರೋಗಿ ಬಯಸಿದ್ದೂ ಹಾಲೂ ಅನ್ನ, ವೈದ್ಯ ಹೇಳಿದ್ದೂ ಹಾಲೂ ಅನ್ನ...' ಎಂಬಂತೆ ಕಾಕು ನಗುತ್ತಲೇ ಭಾರ ಕಳೆದ ಭಾವದಲ್ಲಿ ಬೀಳ್ಕೊಟ್ಟರು. ಕಾಕಾ ಮಾತ್ರ ಹನಿಗಣ್ಣಾಗಿ, "ಆವಾಗಾವಾಗ ಬರ್ತಿರು" ಎಂದು ಬೆನ್ನು ತಟ್ಟಿದ್ದರು. ಅಜಯನ ಎಂಜಿನಿಯರಿಂಗ್ ಮುಗಿದು ಅವನಿಗಾಗಲೇ ಕೆಲಸ ದೊರಕಿತ್ತು. ಅವನ ಪ್ರತಿಷ್ಠೆಗೆ ಧಕ್ಕೆ ಬಂದಂತೆನಿಸಿ ಕಿರಿಕಿರಿ ಮಾಡಿದಾಗ ಕಾಕು ಬಿಸಿನೆಸ್ ನಿಲ್ಲಿಸಿದರು. ನಾನು, ಅವ್ವ ನಿಸೂರಾಗಿ ಉಸಿರು ಬಿಟ್ಟಿದ್ದೆವು. ಮಗನನ್ನು ಹೊಗಳುತ್ತ ಜಗತ್ತನ್ನೇ